## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 832 (886)

ಮಾನ್ಯ ಸದಸ್ಯರ ಹೆಸರು : ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ : 11.03.2026

ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | PWD ಇಲಾಖೆಯಲ್ಲಿ ಖಾಲಿ ಹುದ್ದೆಗಳು ಇದ್ದರೂ ನೇಮಕಾತಿ ಏಕೆ ತಡವಾಗುತ್ತಿದೆ ಹಾಗೂ ಗುತ್ತಿಗೆ ಆಧಾರಿತ ಕೆಲಸಗಳು ಹೆಚ್ಚಾಗುತ್ತಿರುವುದರಿಂದ ಶಾಶ್ವತ ಉದ್ಯೋಗಾವಕಾಶಗಳು ಏಕೆ ಕಡಿಮೆ ಆಗುತ್ತಿವೆ; (ವಿವರ ನೀಡುವುದು) | ಲೋಕೋಪಯೋಗಿ ಇಲಾಖೆಯ ಗ್ರೂಪ್-ಎ ವೃಂದದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ವೃಂದದ ನೇರ ನೇಮಕಾತಿ ಕೋಟಾದಡಿಯ 42 ಉಳಿಕೆ ಮೂಲ ವೃಂದ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ 12ಹುದ್ದೆಗಳನ್ನು ಹಾಗೂ ಗ್ರೂಪ್-ಬಿ ವೃಂದದ ಸಹಾಯಕ ಇಂಜಿನಿಯರ್ (ವಿಭಾಗ-1) ವೃಂದದಲ್ಲಿ 130 ಮತ್ತು ಗ್ರೂಪ್-ಸಿ ವೃಂದದ ಕಿರಿಯ ಇಂಜಿನಿಯರ್ 60 ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.<br><br>ಮುಂದುವರೆದು, ಗ್ರೂಪ್-ಬಿ ವೃಂದದ ಸಹಾಯಕ ಇಂಜಿನಿಯರ್ (ವಿಭಾಗ-1)(ವಿದ್ಯುತ್) ವೃಂದದ 06 ಹಾಗೂ ಗ್ರೂಪ್-ಸಿ ವೃಂದದ ಕಿರಿಯ ಇಂಜಿನಿಯರ್ (ವಿದ್ಯುತ್) 10 ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಪರಿಶೀಲನೆಯಲ್ಲಿರುತ್ತದೆ.<br><br>ಉಳಿದಂತೆ, ಗ್ರೂಪ್-ಸಿ ವೃಂದದ ನೇರ ನೇಮಕಾತಿ ಅಡಿಯಲ್ಲಿ ಬರುವ ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು ಹಾಗೂ ಶೀಘ್ರಲಿಪಿಗಾರರ ವೃಂದದಲ್ಲಿ ಹುದ್ದೆಗಳು ಖಾಲಿ ಇರುವುದಿಲ್ಲ. |
| ಆ) | ಹೊಸ ಪದವೀಧರರಿಗೆ (Fresher) PWD ಇಲಾಖೆಯಲ್ಲಿ ಅವಕಾಶಗಳು ಕಡಿಮೆಯಾಗಲು ಕಾರಣವೇನು; | ಲೋಕೋಪಯೋಗಿ ಇಲಾಖೆಯ ತಾಂತ್ರಿಕ ಹುದ್ದೆಗಳಾದ ಸಹಾಯಕ ಇಂಜಿನಿಯರ್ (ವಿಭಾಗ-1)ರ ವೃಂದದಲ್ಲಿ 660 ಹಾಗೂ ಕಿರಿಯ ಇಂಜಿನಿಯರ್ ವೃಂದದಲ್ಲಿ 330 ಹುದ್ದೆಗಳನ್ನು 2023ನೇ ಸಾಲಿನಲ್ಲಿ ನೇಮಕಾತಿ ಮಾಡಲಾಗಿರುತ್ತದೆ.<br><br>ಇಂಜಿನಿಯರ್ ವೃಂದದಲ್ಲಿ ನೇರ ನೇಮಕಾತಿ ಕೋಟಾದಡಿ ಲಭ್ಯವಾಗುವ ಹುದ್ದೆಗಳನ್ನು, ಇದಕ್ಕೆ ಸಂಬಂಧಿಸಿದ ವಿದ್ಯಾರ್ಹತೆಗಳ ಅನುಸಾರ ಹೊಸ ಪದವೀಧರರಿಗೆ ನಿಯಮಾನುಸಾರ ನೇಮಕಾತಿ ಹೊಂದಲು ಅವಕಾಶವಿರುತ್ತದೆ. ಈ ಹಿನ್ನೆಲೆಯಲ್ಲಿ ಹೊಸ ಪದವೀಧರರಿಗೆ ನೇಮಕಾತಿಯಲ್ಲಿ ಯಾವುದೇ ಅವಕಾಶಗಳು ಕಡಿಮೆಯಾಗಿರುವುದಿಲ್ಲ. |

| | | |
|---|---|---|
| ಇ) | ಕೌಶಲ್ಯ ಹೊಂದಾಣಿಕೆಯ ಕೊರತೆ (skill mismatch) ನಿರುದ್ಯೋಗಕ್ಕೆ ಕಾರಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು; | ಲೋಕೋಪಯೋಗಿ ಇಲಾಖೆಯಲ್ಲಿ ಪ್ರಸ್ತುತ ಕೌಶಲ್ಯ ಹೊಂದಾಣಿಕೆಯ ಕೊರತೆಯಿಂದಾಗಿ ನಿರುದ್ಯೋಗ ಸಮಸ್ಯೆ ಉಂಟಾಗಿರುವುದಿಲ್ಲ. |
| ಈ) | ತರಬೇತಿ ಮತ್ತು ಇಂಟರ್ನ್‌ಶಿಪ್ ಕಾರ್ಯಕ್ರಮಗಳ ಕೊರತೆ ಉದ್ಯೋಗಾವಕಾಶಗಳಿಗೆ ಹೇಗೆ ಅಡ್ಡಿಯಾಗುತ್ತಿದೆ; | ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ತರಬೇತಿ ಮತ್ತು ಇಂಟರ್ನ್‌ಶಿಪ್ ಕಾರ್ಯಕ್ರಮಗಳ ಕೊರತೆಯಿಂದಾಗಿ ಉದ್ಯೋಗಾವಕಾಶಗಳಿಗೆ ಯಾವುದೇ ಅಡ್ಡಿಯಾಗುತ್ತಿಲ್ಲ. |
| ಉ) | ತಂತ್ರಜ್ಞಾನ (Automation Digital tools) ಬಳಕೆ ಉದ್ಯೋಗಾವಕಾಶವನ್ನು ಹೇಗೆ ಬದಲಾಯಿಸುತ್ತಿದೆ? | ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ತಂತ್ರಜ್ಞಾನ (Automation Digital tools) ಬಳಕೆಯಿಂದ ಯಾವುದೇ ಉದ್ಯೋಗಾವಕಾಶಗಳು ಯಾವುದೇ ಬದಲಾವಣೆಗೆ ಒಳಪಟ್ಟಿರುವುದಿಲ್ಲ. |

**ಕಡತ ಸಂಖ್ಯೆ: ಲೋಇ 69 ಸೇಸಅ 2026**

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು.